ಓ:ಎಸ್:ನಂ.*346/2015*

ಪಿ.ಡಬ್ಲ್ಯೂ- *1*

***ದಿಃ 21-06-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.***

ಮುಂದುವರಿದ *ಪಾಟೀ ಸವಾಲುಃ* ಪ್ರತಿವಾದಿ ಪರ ವಕೀಲರಿಂದ

(ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ)

ನಾನು ದಾವ ಆಸ್ತಿಯಲ್ಲಿ ಅತೀಕ್ರಮಣ ಪ್ರವೇಶ ಮಾಡಿ ಅಲ್ಲಿ ಒಂದು ಹೋಟೇಲ್ ವ್ಯವಹಾರ ನಡೆಸುತ್ತಿದ್ದೇನೆಂದರೆ ಸರಿ. ದಾವ ಆಸ್ತಿಯ ಉತ್ತರ ಭಾಗಕ್ಕೆ ಗೋಮಾಳ ಜಮೀನು ಇದೆ, ದಕ್ಷಿಣಕ್ಕೆ ರಸ್ತೆ ಬರುತ್ತದೆ, ಪೂರ್ವಕ್ಕೆ ರಸ್ತೆ ಹಾಗೂ ಪಶ್ಚಿಮಕ್ಕೆಃ ನಿವೇಶನ ಸಂಖ್ಯೆ *6* ಬರುತ್ತದೆ. *2* ಎಕರೆ *5* ಗುಂಟೆ ಗೋಮಾಳ ಜಮೀನಿನಲ್ಲಿ ರಸ್ತೆ, ಚರಂಡಿ ಮತ್ತು ಲೇಔಟ್ ಪ್ಲಾನ್ ಇದೆಯೇ ಎಂದರೆ ಸಾಕ್ಷಿಯು ಮುಚ್ಚಿ ಹೋಗಿರುವ ರಸ್ತೆ ಇದೆ ಎಂದು ನುಡಿಯುತ್ತಾರೆ. ದಾವ ಆಸ್ತಿಯ ಬಗ್ಗೆ ಮಂಜೂರು ಪ್ರಕ್ರಿಯೇ ಚಾಲ್ತಿಯಲ್ಲಿರುವಾಗ ಪಂಚಾಯಿತಿಯ ಪಕ್ಕ ಒಂದು ಸೈಟ್

ನ್ನು ಪಂಚಾಯಿತಿಯವರು ಮಂಜೂರು ಮಾಡಿರುತ್ತಾರೆಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಪಂಚಾಯಿತಿಯಿಂದ ಸದರಿ ನಿವೇಶನವನ್ನು ಕೊಂಡುಕೊಂಡಿದ್ದೇವು ಎಂದು ಸಾಕ್ಷ್ಯ ನುಡಿಯುತ್ತಾರೆ. ನಾನು ನ್ಯಾಯಾಲಯದಲ್ಲಿ ಹಾಜರುಪಡಿಸಿರುವ ಕಂದಾಯ ರಿಸೀದಿಗಳು ಪಂಚಾಯಿತಿ ಪಕ್ಕ ಇರುವ ನಮ್ಮ ನಿವೇಶನಕ್ಕೆ ಸಂಬಂಧಪಟ್ಟವು ಎಂದರೆ ಸರಿಯಲ್ಲ. ನಾನು ದಾವ ಆಸ್ತಿಯಲ್ಲಿ ಮನೆಯನ್ನು ಕಟ್ಟಲು ಹೋದಾಗ ಪಂಚಾಯಿತಿಯವರು ನನಗೆ ಮನೆ ಕಟ್ಟಬಾರದು ಎಂದು ನೋಟೀಸ್ ಜಾರಿ ಮಾಡಿದ್ದರು ಎಂದರೆ ಸರಿಯಲ್ಲ. ದಿನಾಂಕಃ *09-10-2015* ರಂದು ಸೊಕ್ಕೆ ಗ್ರಾಮದ ಗ್ರಾಮ ಪಂಚಾಯಿತಿಯವರು ನನಗೆ ನೋಟೀಸನ್ನು ಜಾರಿ ಮಾಡಿದ್ದರು ಎಂದರೆ ಸರಿಯಲ್ಲ. ನಾನು *2015* ರಲ್ಲಿ ದಾವ ಆಸ್ತಿಯಲ್ಲಿ ಅತೀಕ್ರಮಣ ಪ್ರವೇಶ ಮಾಡಿ ಅದರಲ್ಲಿ ಅನಧೀಕೃತವಾಗಿ ಕಟ್ಟಡ ಕಟ್ಟಲು ಪ್ರಯತ್ನಿಸಿದ್ದೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ದಾವ ಆಸ್ತಿಗೆ ಯಾವುದೇ ರೀತಿ ಅಡೆ ತಡೆ ಮಾಡದೇ ಇದ್ದರೂ ಸಹ ನಾನು ಈ ದಾವೆಗೋಸ್ಕರ ವಾದ ಪತ್ರದಲ್ಲಿರುವ ವಿಷಯವನ್ನು ಸೃಷ್ಠಿ ಮಾಡಿಕೊಂಡಿದ್ದೇನೆಂದರೆ ಸರಿಯಲ್ಲ. ದಾವ ಆಸ್ತಿಯನ್ನು ಲಪಾಟಯಿಸುವ ಉದ್ದೇಶದಿಂದ ಈ ದಾವೆಯನ್ನು ಹಾಕಿದ್ದೇನೆಂದರೆ ಸರಿಯಲ್ಲ. ನಾನು ದಾವ ಹೂಡುವ ಕಾಲಕ್ಕೆ ದಾವ ಸ್ವತ್ತಿನಲ್ಲಿ ಸ್ವಾಧೀನಾನುಭವದಲ್ಲಿ ಇಲ್ಲದೇ

ಇದ್ದರೂ ಸಹ ನಾನು ನ್ಯಾಯಾಲಯದಿಂದ ಮಧ್ಯಂತರ ಆದೇಶವನ್ನು ಪಡೆದ ನಂತರ ನಾನು ದಾವ ಆಸ್ತಿಯಲ್ಲಿ ಅತಿಕ್ರಮಣ ಪ್ರವೇಶ ಮಾಡಿ ಕಟ್ಟಡ ಕಟ್ಟಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ

***(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)***

***ಓ. ಕೇ. ಸ. ಇ. ಎ. ಒ.***

Sd/-

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**

***ಪ್ರ.ದ.ನ್ಯಾ.ದಂ.ರವರು,ತರೀಕೆರೆ.***